sdmimd

## Andolana

**Date:** Sunday, February 09, 2014 **Page No.**06

**Edition:** Mysore **Language:** Kannada

# ಎಸ್‌ಡಿಎಂಐಎಂಡಿಗೆ ಎ** ಮಾನ್ಯತೆ

ಮೈಸೂರು,ಫೆ.೮–ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ಗೆ ಕ್ರೆಡಿಟ್ ರೇಟಿಂಗ್, ಇನ್‌ಫರ್ಮೇಶನ್ ಸರ್ವಿಸಸ್ ಆಫ್ ಇಂಡಿಯಾ ಲಿಮಿಟೆಡ್‌ನಿಂದ ರಾಷ್ಟ್ರೀಯ ಮಟ್ಟದ ಎ** ಮಾನ್ಯತೆ (ಎ ಡಬಲ್ ಸ್ಟಾರ್) ದೊರೆತಿದೆ.

ಎಸ್‌ಡಿಎಂಐಎಂಡಿಯಲ್ಲಿರುವ ಸವಲತ್ತುಗಳು, ಪ್ರವೇಶಾತಿ, ನಿಯೋಜನೆಗಳು, ಶೈಕ್ಷಣಿಕ ತೀವ್ರತೆ ಹಾಗೂ ಹಳೆಯ ಮತ್ತು ಹಾಲಿ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು, ಕೂಲಂಕಷವಾಗಿ ಪರಿಶೀಲಿಸಿ ಈ ಮಾನ್ಯತೆ ನೀಡಲಾಗಿದೆ.

ವ್ಯವಹಾರಕ್ಕೆ ಸಂಬಂಧಿಸಿದ ನಿಯತಕಾಲಿಕೆಗಳು ನಡೆಸಿದ ೨೦೧೩ನೇ ವರ್ಷದ ಸಮೀಕ್ಷೆಯಲ್ಲಿ ಉತ್ತಮ ಸ್ಥಾನ ಪಡೆದಿದ್ದ ಸಂಸ್ಥೆಗೆ ಈ ಮಾನ್ಯತೆಯಿಂದ ಕಿರೀಟಕ್ಕೆ ಹೊಸಗರಿ ಸೇರಿದಂತಾಗಿದೆ.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದಿಂದ ಮಾನ್ಯತೆ ಪಡೆದ ಈ ಸಂಸ್ಥೆಯ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪಠ್ಯವನ್ನು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಗುರುತಿಸಲ್ಪಟ್ಟಿದೆ.